ಶ್ರೀ ಶಂಕರಗೌಡ ವೈ. ಪಾಟೀಲ್.—ಭಾರತ ಗಣರಾಜ್ಯದಲ್ಲಿ ರಾಷ್ಟ್ರಪತಿಗಳವರ ಮತ್ತು ರಾಷ್ಟ್ರ ಪಿತರ ಫೋಟೋವನ್ನು ಉಚ್ಚನ್ಯಾಯಾಲಯದಲ್ಲಿ ಹಾಕಿದ್ದಾರೆಯೇ ಎಂದು ಕೇಳಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಯಾವ ನ್ಯಾಯಾಲಯಕ್ಕೂ ನಾನು ಹೋಗಿಲ್ಲ.

Sri G. B. SHANKAR RAO.—Has this got any national significance ?

Sri S. NIJALINGAPPA.—It is a matter of opinion. We certainly want photographs of these eminent sons of India to be there.

ಶ್ರೀ ಕೆ ಎಸ್. ನಾರ್ಯನಾರಾಯಣರಾವ್.—ಹೈಕೋರ್ಟ್ ಮತ್ತು ಬಾಕಿ ಕೋರ್ಟುಗಳಲ್ಲಿ ಗಾಂಧೀಜಿಯವರ ಫೋಟೋ ಹಾಕುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲೆಲ್ಲಿ ಕೇಳುತ್ತಾರೋ ಅಲ್ಲಲ್ಲಿ ಹಾಕುತ್ತೇವೆ. ಹೈಕೋರ್ಟಿನವರು ರೆಫರೆನ್ಸ್ ಮಾಡಿ ಇಷ್ಟು ಹಣ ಬೇಕೆಂದು ಕೇಳಿದರೆ ಅಷ್ಟು ಹಣವನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಜಿ. ಬಿ. ಶಂಕರರಾವ್.—ಯಾವ ಯಾವ ಫೋಟೋ ಹಾಕಬೇಕು ಎಂದು ಏನಾದರೂ ಪ್ರೊವೀಸೀಜರ್ ಇದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಏನೂ ಇಲ್ಲ.

Buildings at the Bellara Gold Mines.

Q.—150. Sri C. K. RAJAIAH SETTY (Chiknaikanahally).—

Will the Government be pleased to state :—

(*a*) whether it has come to their notice that a major portion of buildings abandoned in Bellara Gold Mines are lying idle ;

(*b*) whether they are aware that these buildings can be used for a mixed animal farm in view of its special conditions suited for the purpose ;

(*c*) if so, the action they propose to take in the matter ?

A.—Sri V. VENKATAPPA (Minister for Education).—

(*a*) They are allotted to the Mysore State Adult Education Council and the Basic Training Institute which has been shifted to this place with effect from 1st June 1957 from Subramanyapura, Bangalore.

(*b*) In view of the reply to (*a*) above, this question does not arise.

(*c*) In view of the reply to (*a*) above, this question does not arise.

Sri C. K. RAJAIAH SETTY.—If the buildings are adequate, will the Government consider the question of opening a mixed animal farm there ?

ಶ್ರೀ ವಿ. ವೆಂಕಟಪ್ಪ.—ಅದು ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ತಾರೇಗೌಡ.—ಅಗ್ರಿಕಲ್ಚರ್ ಮಿನಿಸ್ಟರು ಬೆಳ್ಳಾರ ವಿಸಿಟ್ ಮಾಡಿದಾಗ ರಿಪೇರಿ ಆಗದೆ ಇರುವ ಕಟ್ಟಡಗಳನ್ನು ನೋಡಲಿಲ್ಲವೇ ?

ಶ್ರೀ ವಿ. ವೆಂಕಟಪ್ಪ.—ನೋಡಿರಬಹುದು.

ಶ್ರೀ ಟಿ. ತಾರೇಗೌಡ.—ಅವನ್ನು ರಿಪೇರಿ ಮಾಡುವುದು ಸೂಕ್ತವಲ್ಲವೇ ?

ಶ್ರೀ ವಿ. ವೆಂಕಟಪ್ಪ.—ರಿಪೇರಿ ಮಾಡಬೇಕು ಎಂದು ಏರ್ಪಾಟು ಆಗಿದೆ.

Supply of Electricity for Irrigation purposes to Dharmapura Hobli.

Q.—220. Sri K. KENCHAPPA (Hiriyur).—

Will the Government be pleased to state :—

(*a*) the number of irrigation wells both independent and situated at the banks of the rivers and rivulets actually in use for irrigation purposes by Kapila, Oil Pumps, etc. in Dharmapura Hobli ;

(*b*) whether it is a fact that the ryots of the Dharmapura Hobli are requesting for supply of electricity to the entire Hobli to create better irrigation facilities ;

(*c*) if so, for how long are they requesting for the same ;

(*d*) the number of ryots who have deposited amounts for supply of electricity ;

(*e*) whether they propose to give electricity to this hobli on top priority basis ;

(*f*) if so, the probable time required for the same ?

A.—Sri H. K. VEERANNA GOWDH (Minister for Public Works).—

(*a*) 344.

(*b*) Yes.

(*c*) The applications and deposits were received during the latter part of 1954.

(*d*) 98.

(*e*) The works can be taken up only when 70 per cent of the applicants furnish completion reports in respect of their portion of the work.

(*f*) As soon as possible after completion reports as referred to in the answer to (*e*) above are received.

ಶ್ರೀ ಕೆ. ಕೆಂಚಪ್ಪ.—1951ನೆಯ ಇಸ್ವಿಯಲ್ಲಿ ಕೇಳಿದ್ದಾರೆ. ಇದುವರೆಗೂ ಕೊಡದೆ ಇರುವುದಕ್ಕೆ ಕಾರಣವೇನು?

ಶ್ರೀ ಎಚ್. ಕೆ. ವೀರಣ್ಣಗೌಡ.—ಕಾರಣವನ್ನು ಅನೇಕ ಸಂದರ್ಭಗಳಲ್ಲಿ ಅನೇಕ ಸಾರಿ ಹೇಳಿದ್ದೇವೆ. ಎಷ್ಟುಜನ ಅರ್ಜಿ ಕೊಟ್ಟಿದ್ದಾರೋ, ಅವರಲ್ಲಿ ಶೇಕಡ 70 ಜನ, ಡಿಪಾಜಿಟ್ಟು ಮಾಡಿ, ವೈರಿಂಗ್ ಮುಗಿಸಿ, ಕಪ್ಲೀಂಪನ್ ರಿಪೋರ್ಟು ಸರ್ಕಾರಕ್ಕೆ ಬಂದ ಮೇಲೆ, ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಕೆಂಚಪ್ಪ.—98 ಜನ ಡಿಪಾಜಿಟ್ ಮಾಡಿದ್ದಾರೆ ಎಂದು ತಾವು ಹೇಳಿದ್ದೀರಿ?

Mr. SPEAKER.—The point is, they have applied.

ಶ್ರೀ ಕೆ. ಕೆಂಚಪ್ಪ.—ದುಡ್ಡು ಕೊಟ್ಟಿರುವವರು ಎಷ್ಟು ಜನ?

ಶ್ರೀ ಎಚ್. ಕೆ. ವೀರಣ್ಣಗೌಡ.—ದುಡ್ಡು ಕೊಟ್ಟಿರುವವರು 98 ಜನಗಳು.

ಶ್ರೀ ಕೆ. ಕೆಂಚಪ್ಪ.—98 ಜನಗಳ ಪೈಕಿ 70 ಜನ ಕಂಪ್ಲೀಷ್ಟ್ ರಿಪೋರ್ಟ್ ಕೊಟ್ಟಿಲ್ಲವೇನು?

ಶ್ರೀ ಎಚ್. ಕೆ. ವೀರಣ್ಣಗೌಡ.—ದುಡ್ಡು ಕೊಟ್ಟಿರುವವರು 98 ಜನಗಳು ಆದರೂ ಅವರು ಅರ್ಜಿ ಕೊಟ್ಟಿರುವವರಲ್ಲಿ ಶೇಕಡ 70 ರಷ್ಟು ಬರುವುದಿಲ್ಲ. ಪಾಳ್ಯ ಇತ್ಯಾದಿ ಗ್ರಾಮಗಳಿಂದ ಅರ್ಜಿ ಕೊಟ್ಟಿರುವವರು ಸುಮ್ಮನೆ ಇದ್ದಾರೆ. ಶ್ರೀ ರುದ್ರಪ್ಪನವರು 10 ಸೆಟ್ ಬೇಕು ಎಂದು ಕೇಳಿದರು. ಆದರೆ ಈಗ ಮಾತನಾಡದೆ ಸುಮ್ಮನೆ ಇದ್ದಾರೆ. 98 ಜನ ಡಿಪಾಜಿಟ್ ಮಾಡಿದ್ದಾರೆ; ಅದೆಲ್ಲಾ ಸ್ಯಾಕ್ಷನ್ ಆಗಿ ಲೈನ್ ಎಳೆಯುವುದು ನಿಧಾನವಾಗಿದೆ. ಬಾಕಿ ಜನ ಬರಬೇಕು.

ಶ್ರೀ ಕೆ. ಕೆಂಚಪ್ಪ.—ಶೇಕಡ 70 ಜನ ಕಂಪ್ಲೀಷ್ಟ್ ರಿಪೋರ್ಟ್ ಫರ್‌ನಿಷ್ ಮಾಡಬೇಕು ಎಂದು ಹೇಳಿದಿರಿ. 98 ಜನ ದುಡ್ಡು ಕೊಟ್ಟು ಕಂಪ್ಲೀಷ್ಟ್ ರಿಪೋರ್ಟ್ ಕೊಟ್ಟಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—98 ಜನ ರಿಪೋರ್ಟ್ ಕೊಟ್ಟಿರುವವರು ಒಟ್ಟು ಅರ್ಜಿಕೊಟ್ಟವರಲ್ಲಿ 70 ಪರ್‌ಸೆಂಟ್ ಆಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಅರ್ಜಿದಾರರ ಪೈಕಿ 98 ಜನ ಕೊಟ್ಟಿದ್ದಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—98 ಜನ ಶೇ. 70 ರಷ್ಟು ಆಗುವುದಿಲ್ಲ. 300, 400, ಜನ ಅರ್ಜಿದಾರರು ಇರಬಹುದು.

ಶ್ರೀ ಕೆ. ಕೆಂಚಪ್ಪ.—ಹೋಬಳಿಯಲ್ಲಿ 300 ಜನ ಇದ್ದಾರೆಂದು ಇಫರ್‌ಮೇಷ್ಟ್ ಕೊಟ್ಟಿರುವರು ಯಾರು?

ಅಧ್ಯಕ್ಷರು.—ಸಂಬಂಧಪಟ್ಟ ಅಧಿಕಾರಿಗಳಿಂದ ತರಿಸಿ ಕೊಂಡಿದ್ದಾರೆ.

Sri C. K. RAJAIAH SETTY.—With reference to answer (*e*) may I know how many have given completion reports so far?

Sri H. K. VEERANNA GOWDH.—98.

Sri C. K. RAJAIAH SETTY.—98 are the applications out of which 70 per cent should give completion report. Is it os?

Sri H. K. VEERANNA GOWDH.—The Hon'ble Member is putting a supplementary without reading the original question.

ಶ್ರೀ ಎಂ. ರಾಮಪ್ಪ.—ಇಷ್ಟೇ ಜನ ಡಿಪಾಜಿಟ್ ಮಾಡಬೇಕೆಂದು ಅಂದಾಜು ಇದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಎಷ್ಟು ಜನ ಅರ್ಜಿ ಕೊಡುತ್ತಾರೋ ಆ ಪೈಕಿ ಮುಕ್ಕಾಲು ಭಾಗ ಜನರು ಕಂಪ್ಲೀಷ್ಟ್ ರಿಪೋರ್ಟ್ ಕೊಟ್ಟರೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಕೆಂಚಪ್ಪ.—98 ಜನಗಳು ಅಪ್ಲಿಕೇಷ್ಟ್ ಕೊಟ್ಟಿರತಕ್ಕವರು ಎಂದು ಭಾವಿಸುವುದರಲ್ಲಿ ಏನು ತಪ್ಪಾಗುತ್ತದೆ?

ಅಧ್ಯಕ್ಷರು.—98 ಜನಗಳು ಅಪ್ಲಿಕೇಷ್ಟ್ ಕೊಟ್ಟಿದ್ದರೆ 70 ಪರ್‌ಸೆಂಟ್ ಆಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—Out of the total number of applicants 98 ಜನ ದುಡ್ಡು ಕೊಟ್ಟಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಅಪ್ಲಿಕೇಷನ್ಸ್ ಎಷ್ಟು ಇವೆಯೋ ಅದರಲ್ಲಿ 70 ಪರ್‌ಸೆಂಟ್ ಆಯಿತು ಎಂದು ತಿಳಿದು ಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಈಗ 98 ಜನ ಡಿಪಾಜಿಟ್ ಮಾಡಿರುವವರು ಶೇಕಡ 70 ಆಗುವುದಿಲ್ಲವೇ?

ಅಧ್ಯಕ್ಷರು.—ಅವರು ಎಷ್ಟು ಅಪ್ಲಿಕೇಷ್ಟ್ ಕೊಟ್ಟಿದ್ದಾರೋ ಅದರಲ್ಲಿ 70 ಪರ್‌ಸೆಂಟ್ ಕಂಪ್ಲೀಷ್ಟ್ ರಿಪೋರ್ಟ್ ಕೊಡಬೇಕಾಗುತ್ತದೆ. ಒಟ್ಟು ಅರ್ಜಿಗಳ ಲೆಕ್ಕದಿಂದ 98 ಜನ 70 ಪರ್‌ಸೆಂಟ್ ಆಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಎಷ್ಟು ಅಪ್ಲಿಕೇಷನ್ ಕೊಟ್ಟಿದ್ದಾರೆ ಅದರಲ್ಲಿ 70 ಪರ್‌ಸೆಂಟ್ ಕಂಪ್ಲೀಷನ್ ರಿಪೋರ್ಟ್ ಕೊಡಬೇಕೆಂದು ಹೇಳಿದ್ದಾರೆ. 98 ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದಾರೆಂದು ಹೇಳುತ್ತಿದ್ದೀರಿ. 100 ಅಪ್ಲಿಕೇಷನ್ ಕೊಟ್ಟಿದ್ದಾರೆಂದು ತಿಳಿದುಕೊಂಡು ಕೊಡುವುದಕ್ಕಾಗುವುದಿಲ್ಲವೇ?

Sri H. K. VEERANNA GOWDH.—There many be 400 applications.

ಶ್ರೀ ಕೆ. ಕೆಂಚಪ್ಪ.—ಈಗಲಾದರೂ ಎಲೆಕ್ಟ್ರಿಷಿಟಿಯನ್ನು ಈ ಹೋಬಳಿಗೆ ಕೊಡುವುದಕ್ಕೆ ಮನಸ್ಸು ಮಾಡುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮನಸ್ಸು ಮಾಡಿದೆ; ವಿದ್ಯುಚ್ಛಕ್ತಿ ಲೈನ್ ಎಳೆಯುತ್ತಿದೆ. ಅರ್ಜಿದಾರರ ಪೈಕಿ ಶೇಕಡ 70 ಜನ ಕಂಪ್ಲೀಷನ್ ರಿಪೋರ್ಟ್ ಕೊಟ್ಟಕೂಡಲೇ ಕೊಡಲಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ಡಿಪಾಜಿಟ್ ಕೊಡುವುದಕ್ಕೂ ಕಂಪ್ಲೀಷನ್ ರಿಪೋರ್ಟ್ ಕೊಡುವುದಕ್ಕೂ ವ್ಯತ್ಯಾಸ ವಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ವ್ಯತ್ಯಾಸವಿದೆ. ಡಿಪಾಸಿಟ್ ಮಾಡಿಬಿಟ್ಟು ಅರ್ಜಿ ಹಾಕಬೇಕು. ಆ ಮೇಲೆ ಕಂಪ್ಲೀಷನ್ ರಿಪೋರ್ಟ್ ಕೊಟ್ಟರೆ ಲೈನ್ ಎಳೆಯುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಅಶ್ವಶಕ್ತಿಗೆ 1,200 ರೂಪಾಯಿಗಳಿಗೆ ಹೆಚ್ಚಿಗೆ ಖರ್ಚಾಗದೆ ಇರುವ ಹಾಗೆ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿರಬೇಕಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—98 ಅರ್ಜಿಗಳಿಗೆ ಕೆಲಸಮಾಡುವುದಾದರೆ 1,350 ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚಾಗುತ್ತದೆ ಅಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು.

ಶ್ರೀ ಎಸ್. ಆರ್. ರಾಮಯ್ಯ.—ಕಂಪ್ಲೀಷ್ ರಿಪೋರ್ಟ್ ಕೊಡಬೇಕಾದವರು ಯಾರು ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅರ್ಜಿ ಹಾಕುವವರು.

Sri C. K. RAJAIAH SETTY.—May I know the cost of the estimate of this particular scheme ?

Sri H. K. VEERANNA GOWDH.—Notice.

ಶ್ರೀ ಎಸ್. ಆರ್. ರಾಮಯ್ಯ.—ಕಂಟ್ರಾಕ್ಟರುಗಳಿಂದ ಕಂಪ್ಲೀಷ್ ರಿಪೋರ್ಟ್ ಬರುವುದು ತಡವಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಪ್ರೈವೇಟ್ ಪರ್ಸನ್‌ಗಾದರೆ ಬೇಕಾದವರು ಕಂಟ್ರಾಕ್ಟರಿಂದ ಜಾಗ್ರತೆ ಕಂಪ್ಲೀಷ್ ರಿಪೋರ್ಟ್ ತಾನೇ ಕಳುಹಿಸಬೇಕು.

ಶ್ರೀ ಎಸ್. ಆರ್. ರಾಮಯ್ಯ.—ಕಂಪ್ಲೀಷ್ ರಿಪೋರ್ಟ್ ಕಂಟ್ರಾಕ್ಟರುಗಳಿಂದ ಜಾಗ್ರತೆ ಬರುತ್ತಿಲ್ಲವೆಂದು ದೂರು ಬರುತ್ತಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಅಧ್ಯಕ್ಷರು.—ಅದು ಜನರಲ್ ಪ್ರಶ್ನೆ.

ಶ್ರೀ ಎಚ್. ಜಿ ನರಸಿಂಹೇಗೌಡ.—ನೀರಾವರಿ ಕೆಲಸಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದಿರುವಾಗ ಇಷ್ಟು ಪರ್ಸೆಂಟೇಜ್ ಉತ್ಪತ್ತಿ ಬಂದರೆ ಒದಗಿಸಬೇಕೆಂದು ನಿಯಮವಿದೆಯೇ ?

ಅಧ್ಯಕ್ಷರು.—ಅದು ಬಹಳ ಜನರಲ್ ಪ್ರಶ್ನೆ.

Misappropriation of Money by Sri Mutha Iyengar of the Chitaldrug Taluk Land Mortgage Bank.

Q.—249. Sri K. KENCHAPPA (Hiriyur).—

Will the Government be pleased to state :—

(*a*) the amount of misapropriation by Sri Mutha Iyengar that was traced in the administration of the Chitaldrug Taluk Land Mortgage Bank situated at Chitaldrug;

(*b*) what was the period during which the annual meeting of the General Body was delayed by the Directors during the period;

(*c*) Whether this amount was recovered and if not so far, the methods proposed to recover the amount;

(*d*) whether they contemplated to recover the said amount from the members and Directors of the Society ?

A.—Sri S. NIJALINGAPPA (Chief Minister).—

(*a*) Rs. 22,632-1-11.

(*b*) From 1949-50 to 1952-53.

(*c*) No amount has been recovered yet. The accused has conveyed his immovable propertiesworth Rs. 15,000 in favour of the society. Necessary action is being taken to dispose of the same. Besides, a sum of Rs. 825-8-0 due towards Provident Fund is also pending adjustment.

(*d*) This is under examination.

ಶ್ರೀ ಕೆ. ಕೆಂಚಪ್ಪ.—ರೂಪಾಯಿ 22,632-1-11 ದುರ್ವಿನಿಯೋಗವಾಗಿದೆ, 1949-50ರಿಂದ 1952-53ರ ವರೆಗೆ ವಾರ್ಷಿಕ ಸಭೆ ನಡೆಯುವುದು ವಿಳಂಬವಾಯಿತು ಎಂದು ಉತ್ತರದಲ್ಲಿ ಹೇಳಿದೆ. ಇದುವರೆಗೂ ಈ ಹಣವನ್ನೇಕೆ ವಸೂಲುಮಾಡಿಲ್ಲ ?

ಶ್ರೀ ಎಸ್. ನಿಜಲಿಂಗಪ್ಪ.—ಗೊತ್ತಾದ ತಕ್ಷಣ ಕ್ರಮತೆಗೆದುಕೊಂಡು ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಕ್ರಮ ತೆಗೆದುಕೊಂಡ ಮೇಲೆ ಈ ಬಾಬತು ಬಹಳ ಹಣ ಆತನಿಂದ ವಸೂಲಾಗಿದೆ. ಆಸ್ತಿಯನ್ನು ಬರೆದು ಕೊಟ್ಟಿದ್ದಾರೆ, ಕ್ರಮ ನಡೆಯುತ್ತಲೇ ಇದೆ.

ಶ್ರೀ ಕೆ. ಕೆಂಚಪ್ಪ.—ಈಗ 15 ಸಾವಿರ ರೂಪಾಯಿ ಬೆಲೆ ಬಾಳುವ ಆಸ್ತಿ ಬರೆದು ಕೊಟ್ಟಿದ್ದಾರೆಂದು ಹೇಳಿದೆ. ಆ ಆಸ್ತಿ 15 ಸಾವಿರ ರೂಪಾಯಿ ಬೆಲೆಯಾಗುತ್ತದೆಂದು ಯಾವ ಆಧಾರದ ಮೇಲೆ ಹೇಳುವುದು ?

ಶ್ರೀ ಎಸ್. ನಿಜಲಿಂಗಪ್ಪ.—ಸಾಧಾರಣವಾಗಿ ಬೆಲೆ ಗೊತ್ತಾಗುತ್ತದೆ.

ಶ್ರೀ ಕೆ. ಕೆಂಚಪ್ಪ.—ಅದಕ್ಕೆ ಇಂಜನಿಯರಿಂದ ಎಸ್ಟಿಮೇಟ್ ಮಾಡಿಸಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಮಾನ್ಯವಾಗಿ ಜಮೀನಿಗೆ ಇಂಜನಿಯರಿಂದ ಎಸ್ಟಿಮೇಟ್ ಮಾಡಿಸುವುದಿಲ್ಲ; ಮನೆಗಳಿಗೆ ಮಾಡಿಸುತ್ತಾರೆ. ಈಗ ಬಂದಿರುವ ಆಸ್ತಿಯಲ್ಲಿ ಜಮೀನು, ಮನೆ ಎರಡೂ ಸೇರಿವೆ. ಸಾಕಾದಷ್ಟು ಬುದ್ಧಿವಂತರು, ತಜ್ಞರು ಸೇರಿ ಅಂದಾಜು ಮಾಡಿದ್ದಾರೆ. ಕೆಲವು ಸಂದರ್ಭಗಳಲ್ಲಿ 5 ಸಾವಿರ ರೂಪಾಯಿ ಬೆಲೆ ಬಾಳುವ ಸ್ವತ್ತು 7 ಸಾವಿರ ರೂಪಾಯಿಗೆ ಹರಾಜಾಗಿದೆ.

ಶ್ರೀ ಬಿ. ಎಸ್. ಶಂಕರಪ್ಪ.—ಪ್ರಶ್ನೆಯ (*b*) ಭಾಗಕ್ಕೆ ಉತ್ತರವಾಗಿ ವಾರ್ಷಿಕ ಸಭೆ ನಡೆಯುವುದು ನಿಧಾನವಾಗಿದೆಯೆಂದು ಹೇಳಿದೆ. ಜನರಲ್‌ಬಾಡಿ ಮೀಟಿಂಗ್ ಕರೆಯುವುದನ್ನು ನಿಧಾನ ಮಾಡಿದ್ದರಿಂದ ಹಣ ದುರುಪಯೋಗವಾಗುವುದಕ್ಕೆ ಸೆಕ್ರೆಟರಿ ಜವಾಬ್ದಾರರೆಂದು ನಿರ್ಧಾರ ಮಾಡಬಹುದಾಗಿತ್ತಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅಭಿಪ್ರಾಯದ ಮಾತು.

ಶ್ರೀ ಬಿ. ಎಸ್. ಶಂಕರಪ್ಪ.—ಹಾಗೆ ನಿರ್ಧಾರ ಮಾಡಿಲ್ಲವೆ ?

Sri S. NIJALINGAPPA.—I am not aware of that decision.

ಶ್ರೀ ಎಂ. ರಾಮಪ್ಪ.—ವಶಪಡಿಸಿಕೊಂಡ ಆಸ್ತಿಯು ಎಷ್ಟು ಬೆಲೆ ಬಾಳಬಹುದೆಂದು ಎಸ್ಟಿಮೇಟ್ ಮಾಡಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇತ್ತೀಚೆಗೆ ಮಾಡುತ್ತಿದೆ.

ಶ್ರೀ ಎಂ. ರಾಮಪ್ಪ.—ಮನೆ ಎಷ್ಟು ಬಾಳಬಹುದು ? ಜಮೀನು ಎಷ್ಟು ಬಾಳಬಹುದು ?

ಶ್ರೀ ಎಸ್. ನಿಜಲಿಂಗಪ್ಪ.—ಆ ಸಮಾಚಾರ ನನ್ನಲ್ಲಿಲ್ಲ.